CC-O. In Public Domain. Digitized by eGangotri

ಗೂಳಿಯ ಗಣೇಶ

ಪಿ. ಎನ್. ತುಂಗಮ್ಮ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಗೂಳೂರು ಗಣೇಶ



ಲೇಖಕರು : ಪಿ. ಎನ್. ತಂಗಮ್ಮ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈ ಸೂ ರು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲನೆಯ ಮುದ್ರಣ—೨,೦೦೦ ಪ್ರತಿಗಳು, ೧೯೭೭
ಎರಡನೆ ಮುದ್ರಣ—೫,೦೦೦ ಪ್ರತಿಗಳು, ೧೯೮೦
ಮೂರನೆ ಮುದ್ರಣ—೬,೦೦೦ ಪ್ರತಿಗಳು, ೧೯೮೪

ಬೆಲೆ ರೂ. 2-50

ಮುದ್ರಕರು : ಜಯಲಕ್ಷ್ಮಿ ಪ್ರಿಂಟರ್ಸ್
ರಾಮಾನುಜ ರಸ್ತೆ, ಮೈಸೂರು
Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಅನಕ್ಷರಸ್ಥ ವಯಸ್ಕರು ಓದು ಬರಹ ಕಲಿತ ಮಾತ್ರಕ್ಕೆ ವಯಸ್ಕರ ಶಿಕ್ಷಣ ಪ್ರಗತಿಯು ಸಾಧಿಸಿತು ಎಂದು ಲೆಕ್ಕಾಚಾರ ಹಾಕುವುದು ಸರಿಯಲ್ಲ. ಕಲಿತ ಓದನ್ನು ಯಾವ ಮಟ್ಟಕ್ಕೆ ಉಳಿಸಿಕೊಂಡಿದ್ದಾರೆ, ಉಳಿಸಿಕೊಳ್ಳಲು ಯಾವ ಬಗೆಯ ಪ್ರಯತ್ನ ಮಾಡುತ್ತಿದ್ದಾರೆ ಇತ್ಯಾದಿಯ ಬಗ್ಗೆ ವಯಸ್ಕರ ಶಿಕ್ಷಣದ ರಂಗದ ಬಗ್ಗೆ ಆಸಕ್ತಿಯಿರುವ ಯಾರೇ ಆಗಲಿ ಇಂದು ಪ್ರಾಮಾಣಿಕವಾಗಿ ಚಿಂತಿಸಬೇಕಾದ, ಆ ದಿಕ್ಕಿನಲ್ಲಿ ಕೆಲಸಮಾಡಬೇಕಾದ ಅನಿವಾರ್ಯತೆ ಇಂದು ಇದೆ.

ಈ ಹಿನ್ನೆಲೆಯಲ್ಲಿ ವಯಸ್ಕರು ಕಲಿತ ಓದನ್ನು ಉಳಿಸಿಕೊಳ್ಳಲು ಓದಿನ ಮೂಲಕ ಅರಿವು ಮೂಡಿ ಆತನ ಬದುಕು ಪ್ರಗತಿಯ ಕ್ರಿಯಾಶೀಲತೆಯತ್ತ ನಡೆಯಲು ಸಹಾಯಕವಾಗುವಂತೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹೊರತಂದಿರುವ ವಯಸ್ಕರಿಗೆ ಉಪಯುಕ್ತವಾದ, ಅಪರ ಆಸಕ್ತಿ ಅಭಿರುಚಿಗೆ ಅನುಗುಣವಾಗಿ ಓದಲು ಸುಲಭವಾದ ಅನುಭವಿ ಲೇಖಕರು ಬರೆದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಲ್ಲಿ ಈ ಕೃತಿಯೂ ಒಂದು.

ಈಗಾಗಲೇ ಹೊರಬಂದಿರುವ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳಿಂದೇ ಜನಪ್ರಿಯವಾಗಿರುವ, ಓದುಗರಿಂದ, ಸಾಹಿತ್ಯಾಸಕ್ತರಿಂದ ನಾಡಿನಾದ್ಯಂತ ಮೆಚ್ಚುಗೆ ಪಡೆದಿರುವ ಈ ಮಾಲಿಕೆಯ ಪುಸ್ತಕಗಳಲ್ಲಿ ಒಂದು ನೂರು ಕೃತಿಗಳ ಪುನರ್ ಮುದ್ರಣ ಕೈಗೊಳ್ಳಲಾಗಿದೆ. ಈ ಕೃತಿಗಳು ನಮ್ಮ ಉದ್ದೇಶದ ಈಡೇರಿಕೆಯಲ್ಲಿ ಸಫಲವಾಗಬಲ್ಲವು ಎಂಬ ಆಶಯ ನಮ್ಮದು.

ಪ್ರಕಟಣಾ ಕಾರ್ಯದಲ್ಲಿ ಸಹಕರಿಸಿದ ಎಲ್ಲರಿಗೂ ನನ್ನ ವಂದನೆಗಳು.

ಮೈಸೂರು
15-11-88

ದೇವನೂರು ಶಿವಮಲ್ಲು
ಅಧ್ಯಕ್ಷರು
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಗೂಳೂರು ಗಣೇಶ

ಬೆಂಗಳೂರಿಂದ ಹೊರಟು ಪೂನಾ ಗಾಡಿಯಲ್ಲಿ ಕುಳಿತರೆ ದಾರಿಯಲ್ಲಿ ತುಮಕೂರು ಸ್ಟೇಷನ್ ಸಿಕ್ಕುತ್ತದೆ. ಅಲ್ಲಿ ಇಳಿದು ಸ್ಟೇಷನ್ ದಾಟಿ ಬಂದರೆ "ಬನ್ನಿ, ಬನ್ನಿ, ಇಲ್ಲಿ ಕುಳಿತುಕೊಳ್ಳಿ, ಕುಣಿಗಲಿಗೆ ಹೋಗುವ ಬಸ್" ಎಂದು ಕೂಗುತ್ತ ಕಂಡಕ್ಟರುಗಳು ಬರುತ್ತಾರೆ. ಅದರಲ್ಲಿ ಹತ್ತಿ ಕುಳಿತು ಸುಮಾರು ಮೂರು ಮೈಲಿ ಹೋದರೆ ಒಂದು ಕೆರೆ ಕಾಣುತ್ತದೆ. ಬಸ್ಸು ಹೋಗುತ್ತಿರುವಾಗ ಕೆರೆಯ ಎರಡು ಕಡೆಗಳಲ್ಲೂ ಹಚ್ಚನೆಯ ಬತ್ತದ ಪೈರು ಕಣ್ಣಿನ ದೃಷ್ಟಿಯು ಹೋಗುವವರೆಗೂ ಕಾಣುತ್ತದೆ. ಇದೂ ಅಲ್ಲದೆ ಎಲ್ಲಿ ನೋಡಿದರೂ ಅಡಿಕೆ, ತೆಂಗು, ಬಾಳೆಯ ತೋಟಗಳು ಈ ಪ್ರದೇಶವನ್ನೇ ಆಕ್ರಮಿಸಿ ದಂತಿವೆ. ತಣ್ಣನೆಯ ಗಾಳಿಯು ಈ ಹಸುರು ಪೈರಿನ ಮೇಲೆ ಬೀಸುವಾಗ ಅದರಿಂದ ಏಳುವ ಕೆಂಪು ಅಲೆಗಳೂ, ತೋಟಗಳಲ್ಲಿ ನುಸಿದು ಹೋಗುತ್ತಿರುವಾಗ ಅಲ್ಲಿ ಉಂಟಾಗುವ ಶಬ್ದವೂ ಪ್ರಶಾಂತವಾದ ನೀಲಿಯ ಗಗನವೂ ಒಟ್ಟು ಸೇರಿ ಈ ಪ್ರದೇಶವು ಪ್ರಯಾಣಿಕರಿಗೆ ಮನೋರಂಜಕವಾಗಿರುವುದು. ಆಗ ಸ್ವಲ್ಪ ನಿಲ್ಲೋಣ ವೆಂದರೆ ಬಸ್ಸು ಮುಂದೆ ಹೋಗುವುದು. ಒಂದು ಸಣ್ಣ ಊರಿನ ಅಂಗಡಿಯ ಹತ್ತಿರ ನಿಲ್ಲುವುದು. ಇದೇ ಗೂಳೂರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಗೂಳೂರು ೫೦೦ ಅಥವಾ ೬೦೦ ಮನೆಗಳಿರುವ ಒಂದು ಹಳ್ಳಿ. ದೊಡ್ಡ ರಸ್ತೆ ನಾಲ್ಕೇ ಇವೆ. ಕರಿಯ ಮಣ್ಣಿನ ಮನೆಗಳೇ ಹೆಚ್ಚು. ಬಸ್ಸು ನಿಲ್ಲುವ ಸಮೀಪದಲ್ಲೇ ಒಂದು ಶಾಲೆ ಇದೆ. ಕೆಲವು ಅಂಗಡಿಗಳು ಒಂದೆರಡು ಹೋಟಲುಗಳು ಇವೆ. ಆದರೆ ಊರು ಸುತ್ತ ತೆಂಗು, ಅಡಕೆ, ಬಾಳೆ ತೋಟಗಳು ಕೋಟೆ ಗೋಡೆಯಂತೆ ಎದ್ದು ಕಾಣುತ್ತವೆ. ಈ ಬಸ್ಸಿನಿಂದ ಇಳಿದು ನಾಲ್ಕು ಮಾರು ದೂರ ನಡೆದು ಹೋದರೆ ಒಂದು ಕಲ್ಲುಮಂಟಪ ಕಾಣಿಸುತ್ತದೆ. ಬಿಡಿ ದಿನಗಳಲ್ಲಿ ನಾವು ಕಾಣುವುದು ಜೇಡಿ ಮಣ್ಣಿನಿಂದ ತುಂಬಿದ ಎರಡಂಕಣದ ಒಂದು ಕಲ್ಲು ಮಂಟಪ. ಆದರೆ ಈ ಕಲ್ಲು ಮಂಟಪಕ್ಕೆ ಎಷ್ಟು ಪ್ರಾಶಸ್ತ್ಯ ಇದೆ ಎಂಬುದನ್ನು ನೋಡಬೇಕಾದ್ದು ನರಕ ಚತುರ್ದಶಿಯ ದಿನ.

ಭಾದ್ರಪದ ಶುದ್ಧ ಚೌತಿ ದಿನ ಮನೆ ಮನೆಯಲ್ಲೂ ಸಡಗರ. ಮಾವಿನ ಮರದ ಎಲೆಗಳು ಮನೆಯ ಬಾಗಿಲುಗಳ ಮೇಲೂ, ದೇವರ ಮಂಟಪಗಳ ಮೇಲೂ ಅವರವರ ಕಲೆಯ ಕುಶಲತೆಗೆ ತಕ್ಕಂತೆ ಜೋಡಿಸಲ್ಪಟ್ಟಿರುತ್ತವೆ. ಗಿಡ ಮರ ಬಳ್ಳಿಗಳಲ್ಲಿ ಬೆಳೆಯುವ ನಾನಾ ತೆರನಾದ ಸೊಪ್ಪಿನ ದಳಗಳು ಭಕ್ತಿಯಿಂದ ಬಹಳ ಅಂದವಾಗಿ ಬೆಳಗಿ ಮಿರಮಿರನೆ ಹೊಳೆಯುತ್ತಿರುವ ತಟ್ಟೆಗಳಲ್ಲಿ ದೇವರ ಮುಂದ್ದಾಸನದ ಮುಂದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಣುತ್ತಿರುತ್ತವೆ. ಮನೆಯ ಮುಂದೆಯೂ, ಪಡಸಾಲೆಯಲ್ಲೂ ಕಂಗೊಳಿಸುವ ಕೆಮ್ಮಣ್ಣು, ರಂಗವಲ್ಲಿಗಳಲ್ಲಿ ಹೆಣ್ಣು ಮಕ್ಕಳ ಕೈ ಕುಶಲತೆ ಕಂಡುಬರುತ್ತದೆ. ಕೈಯಲ್ಲಿ ಕಾಸಿರಲಿ ಇಲ್ಲದಿರಲಿ ಮನೆಮನೆಗೂ ಬಾಳೇಕಂಬ. ಗಣೇಶನನ್ನು ಮನೆಗೆ ಬರಮಾಡಿಕೊಳ್ಳುವುದರಲ್ಲಿ ನಾನು ತಾನೆಂದು ಹುಡುಗರ ಮೇಲಾಟ.

ನಾವುಗಳು ಅಂಗಡಿಯಿಂದ ಗಣೇಶನನ್ನು ತಂದು ಮನೆಗಳಲ್ಲಿ ಪೂಜೆಮಾಡುವಂತೆ ಗೂಳೂರಿನ ಜನರೆಲ್ಲರೂ ಸೇರಿ ಗಣೇಶನನ್ನು ಬಹು ಸಂಭ್ರಮದಿಂದ ಓಲಗದೊಡನೆ ಕರೆತಂದು, ಸಾರಿಸಿ ಗುಡಿಸಿ ರಂಗವಲ್ಲಿಯನ್ನಿಟ್ಟು ತೋರಣ ಬಾಳೆಕಂದುಗಳಿಂದ ಅಲಂಕಾರಮಾಡಿದ ಈ ಕಲ್ಲು ಮಂಟಪದಲ್ಲಿ ಪೂಜೆಮಾಡುತ್ತಾರೆ.

ಮರುದಿವಸದಿಂದ ಊರಿನವರೆಲ್ಲ, ಒಬ್ಬರೂ ಬಿಡದೆ, ಪ್ರತಿ ದಿವಸವೂ ಮರಳೂರಿನ ಕೆರೆಯಿಂದ ಒಂದೊಂದು ಹಿಡಿ ಜೇಡಿಮಣ್ಣನ್ನು ತಂದು ಈ ಕಲ್ಲು ಮಂಟಪಕ್ಕೆ ಸೇರಿಸುತ್ತಾರೆ. ಮೂರು ದಿನಗಳನಂತರ ಈ ಕಲ್ಲು ಮಂಟಪಕ್ಕೆ ತೆರೆಹಾಕಿಬಿಡುತ್ತಾರೆ. ಕೆಲಸಗಾರರಲ್ಲಿ ತಮ್ಮ ತಮ್ಮ ಕೆಲಸದ ಹಂಚಿಕೆ ಆಗುತ್ತದೆ. ಅವರ ಸಂಭ್ರಮವನ್ನೂ, ವಿನಾಯಕನನ್ನು ಎಲ್ಲಿಯವರೆಗೆ ಮುಗಿಸಿದರು ಎಂದು ನೋಡಬೇಕೆಂದಿರುವ ಹುಡುಗರ ಕುತೂಹಲವನ್ನೂ ಹೇಳ ಶಿರದು. ದೀಪಾವಳಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ನರಕ ಚತುರ್ದಶಿ ದಿನ ತೆರೆ ತೆಗೆಯುವರು. ಊರಿನ ಜನರೆಲ್ಲರೂ ತೆರೆ ತೆಗೆಯುವುದನ್ನೇ ಕಾದು ಕುಳಿತಿರುವರು.

ನರಕ ಚತುರ್ದಶಿಯ ದಿನ ಮುಂಜಾನೆ ಎಲ್ಲರೂ ಗಂಗಾಸ್ನಾನ ಮಾಡಿ ಹಣ್ಣು ಕಾಯಿಗಳನ್ನು ತಟ್ಟೆಯಲ್ಲಿಟ್ಟುಕೊಂಡು ಭಕ್ತಿಯಿಂದ ಹೆಂಗಸರು ಗಂಡಸರು ಗುಂಪು ಗುಂಪಾಗಿ ಈ ಕಲ್ಲು ಮಂಟಪದ ಹೊರಗೆ, ಮೊದಲನೆಯ ಮಹಾಮಂಗಳಾರತಿಗೆ ಮೊದಲು ನಾನು ತಾನೆಂದು ಕಾದಿರುತ್ತಾರೆ. ಅವರ ಮೊದಲ ದೃಷ್ಟಿಗೆ ಬೀಳುವ ವಿನಾಯಕನು ಕವಿಗಳು ಕಂಡು ವರ್ಣಿಸಿರುವ ಮೂರ್ತಿಯೇ ಸರಿ. ಮೂರು ಚವರ ಅಂಕಣದಲ್ಲಿ ದೊಡ್ಡ ಆಕಾರದ ಮೂರ್ತಿಯು ಕಣ್ಣಿಗೆ ಬೀಳುತ್ತದೆ.

ವಿಶಾಲವಾದ ಹಣೆ, ಅದಕ್ಕೆ ಒಪ್ಪುವ ಎತ್ತರವಾದ ಕಿರೀಟ, ಕರಿಮೋಡಗಳ ಛಾಯೆಯನ್ನು ಮೀರಿದ, ಜೊಂಪಲು ಜೊಂಪಲಾಗಿ ಭುಜಕ್ಕೂ ಕಿರೀಟಕ್ಕೂ ಸ್ವಲ್ಪವೂ ಬಿಟ್ಟುಕೊಡದಂತಿರುವ ಮೊದಗಲ ಕಿವಿಗಳು, ಉನ್ನತವಾದ ಹಣೆಯಿಂದ ಇಳಿದು ಬಂದಿರುವ ದೊಡ್ಡ ಸೊಂಡಿಲು, ಉಬ್ಬಾದ ಹಣೆಯ ಅಕ್ಕಪಕ್ಕದಲ್ಲಿ ತೀವ್ರ ದೃಷ್ಟಿಯನ್ನು ಬೀರುತ್ತಲಿರುವ ಸಣ್ಣ ಕಣ್ಣುಗಳು, ಯಾರೊಡನೆಯಾದರೂ ಕಾಳಗಕ್ಕೆ ನಿಲ್ಲಲು ನೆರವಾಗುವಂತೆ ಪೌರಷವನ್ನು ತೋರಿಸುತ್ತಲಿರುವ ಅಗಲವಾದ ಎದೆ, ಅದರ ಮೇಲೆ ದೊಡ್ಡ ಜನಿವಾರ, "ಎಷ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಡುಬುಗಳನ್ನಾದರೂ ತುಂಬಲು ನನ್ನ ಹೊಟ್ಟೆ ಜಾಗ ವನ್ನು ಕೊಡಬಲ್ಲದು" ಎಂದು ತೋರಿಸುವ ಅತಿಶಯ ವಾದ ಹೊಟ್ಟೆ, "ಇವನನ್ನು ಆಶ್ರಯಿಸಿದ ಮೇಲೆ ನನಗೇತರ ಭಯ ? ಗರುಡ ಇನ್ನು ಮೇಲೆ ನನಗೆ ಅಂಜ ಬೇಕು" ಎಂದು ನಿರ್ಭೀತಿಯಿಂದ ಹೊಟ್ಟೆಯ ಸುತ್ತಲೂ ಬಳಸಿ ಬಂದು, ಹೊಕ್ಕುಳ ಬಳಿ ಹರ್ಷಚಿತ್ತದಿಂದ ಹೆಡೆ ಯಾಡುತ್ತಿರುವ ನಾಗ, ತುಂಬಿದ ಹೊಟ್ಟೆಯನ್ನು ಹೊರಲಾರೆನೆಂದು ಜೋತುಬಿದ್ದಿರುವ ತೊಡೆಗಳು, ಆಕಾರವು ಸಣ್ಣದಾದೊಡೇನು ಬಲದಲ್ಲಿ ನಾವು ಯಾರಿಗೆ ಸಾಟಿ ಎಂದು ಗಜಾನನನಿಗೆ ನೆರವಾಗಿ ಬಂದ ಇಲಿಗಳ ತಂಡ, "ಬಲ್ಲರ್ಗೆ ಪಲ್ಲೀ ನಿಜಾಯುಧಂ" ಎಂಬುದನ್ನು ತೋರುತ್ತಲ್ಲಿರುವ, ಮುರಿದ ಹಲ್ಲಿನಿಂದಲೂ, ಶೊಂತಾಯುಧದಿಂದಲೂ ತನ್ನ ಸಾಹಸವನ್ನು ತೋರುತ್ತ ಲಿರುವ ಎರಡು ಕೈಗಳು, ತನ್ನೆಡೆಗೆ ಬಂದ ಬಕುತರಿಗೆ ಮುಡುಪಾಗಿಟ್ಟಿರುವ ಎರಡು ಅಭಯ ಹಸ್ತಗಳು, ಇಂತೊಪ್ಪುವ ಕಲೆಯ ಮೂರ್ತಿಯ ಭಕ್ತರ ದೃಷ್ಟಿಗೆ ಮೊದಲನೆಯ ಮಂಗಳಾರತಿಯಲ್ಲಿ ಬೀಳುವ ಈ ದೃಶ್ಯ ವನ್ನು ನೋಡಿದವರ ಮನಸ್ಸು ಮಿದುವಾಗುವುದು. ತನ್ನ ಅರಿವೇ ತನಗಿಲ್ಲದಂತೆ ಭಕ್ತಿಪರವಶನಾಗಿ, ಕಣ್ಣಿಂದ ಹನಿಗಳು ಮಾಲೆ ಮಾಲೆಯಾಗಿ ಬಿದ್ದು ಮೂಷಕ ವಾಹನನ ಪಾದ ತಲದಲ್ಲಿ ಬೀಳುವುವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂತಹ ದೊಡ್ಡ ಆಕೃತಿಯುಳ್ಳ ಮೂರ್ತಿಯೊದರೂ ಅದರಲ್ಲಿ ಸ್ವಲ್ಪವೂ ಕುಂದು ಕೊರತೆಗಳು ಕಂಡುಬರುವುದಿಲ್ಲ. ಆ ರಂಗುಗಳನ್ನು ಜೋಡಿಸುವ ಕುಶಲತೆಯೂ ಆ ಉನ್ನತವಾದ ಆಕಾರಕ್ಕೆ ತಕ್ಕಂತೆ ಒಪ್ಪುವ ಕೈಕಾಲುಗಳು, ಮುಖದ ಭಾವ ಭಂಗಿ ಇವುಗಳು ಒಂದಕ್ಕೊಂದಕ್ಕೆ ಅಷ್ಟು ಹೊಂದಿಕೊಂಡಂತಿದೆ. ಹೊರಗಿನಿಂದ ಈ ಮೂರ್ತಿಯನ್ನು ಒಮ್ಮೆ ನೋಡಿದರೆ ಸಾಕು. ಹೃದಯವು ಕದಡಿ, ಮೈ ರೋಮಾಂಚವಾಗಿ, ಮನಸ್ಸಿನ ಮೇಲೆ ಒಂದು ಪರಿಣಾಮ ಉಂಟಾಗಿ ಈ ಮೂರ್ತಿಯ ಭಾವಚಿತ್ರವು ಮನಸ್ಸಿನಲ್ಲಿ ನಿಲ್ಲುವುದು. ಈ ಸುಂದರ ಮೂರ್ತಿಗೆ ಒಂದು ತಿಂಗಳ ತನಕ ಪೂಜೆ ನಡೆಯುವುದು.

ಈ ಗಣೇಶನನ್ನು ನೋಡಲು ಸುತ್ತಮುತ್ತಲಿನ ಪ್ರದೇಶಗಳಿಂದ ಜನರು ಬರುವರು. ಮನೆಗಳಲ್ಲಿ ಇಲಿಗಳ ಕಾಟವು ಹೆಚ್ಚಾಗಲು ಇಲಿಗಳನ್ನು ಮಾಡಿಸಿ ಹಾಕುತ್ತೇನೆಂದು ಹರಸಿಕೊಂಡವರು, ಮಕ್ಕಳ ಹೊಟ್ಟೆ ಉಬ್ಬರಕ್ಕಾಗಿ ಹರಸಿಕೊಂಡವರು, ವ್ಯಾಪಾರದಲ್ಲಿ ಒಳ್ಳೆಯ ಲಾಭಬರುವುದಕ್ಕಾಗಿ ಕಾಣಿಕೆ ಇಡುವವರು, ಸಂಸಾರದ ತೊಡಕು ತೊಂದರೆಗಳ ನಿವಾರಣೆಗಾಗಿ ಮುಡುಪುಕಟ್ಟಿ ಬೇಡಿಕೊಂಡಿರುವವರು.....ಇವರುಗಳೆಲ್ಲ ಗುಂಪು ಗುಂಪಾಗಿ ಬರುವರು.

ಇಷ್ಟೇ ಅಲ್ಲ, ಪರೀಕ್ಷೆಯಲ್ಲಿ ಪ್ಯಾಸಾಗಬೇಕೆಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇಳಿಕೊಂಡಿರುವವರು, ಒಳ್ಳೆಯ ಬೆಳೆಯಾಗಬೇಕೆಂದು ತಲೆಯ ಮೇಲೆತ್ತಿ ಕೈಯ ಜೋಡಿಸಿರುವವರು ; ಅತ್ತೆಯವರ ಕಾಟ ತಪ್ಪಿ ಬೇರೆ ಸಂಸಾರ ಮಾಡಿ ಕೊಟ್ಟರೆ ಮಹಾಮಂಗಳಾರತಿ ಮಾಡಿಸುವೆನೆಂದು ಬೇಡಿ ಕೊಂಡಿರುವ ಸೊಸೆಯರ ತಂಡ, ತಂಬಿಟ್ಟು ದೀಪ ತರುವವರ ತಂಡ, ಹೊಂಬಾಳೆ ಕಲಶ ತರುವವರ ಗುಂಪು, ಹೀಗೆ ಜನಗಳ ಗುಂಪು ತಂಡವಾಗಿ ಬರುವುದು. ಮುಂಜಾನೆಯಿಂದ ಸಂಜೆಯವರೆಗೆ ಅರ್ಚಕರಿಗೆ ಮಂಗಳಾರತಿ ಎತ್ತಿದ ಕೈ ಇಳಿಸುವಂತಿಲ್ಲ. ಮಂತ್ರ ಹೇಳುವ ಬಾಯಿಗೆ ವಿಶ್ರಾಂತಿ ಎನ್ನುವುದು ಅಪರೂಪ. ಈ ರೀತಿಯಿಂದ ದೀಪಾವಳಿಯಲ್ಲಿ ಪ್ರಾರಂಭಿಸಿದ ಪೂಜೆಯು ಕಾರ್ತೀಕ ಪೌರ್ಣಮಿಯವರೆಗೆ ವಿಕಪ್ರಕಾರವಾಗಿ ನಡೆಯುವುದು. ಪೌರ್ಣಮಿ ಕಳೆದು ತದಿಗೆಯ ದಿನ ಬಲು ದೊಡ್ಡ ಜಾತ್ರೆಯಾಗುವುದು. ಈ ಜಾತ್ರೆಗಾಗಿ ಸುತ್ತಮುತ್ತಿನ ಹಳ್ಳಿಯ ಜನರ ದೊಡ್ಡ ಗುಂಪು ಸೇರುತ್ತದೆ.

ಈ ಜಾತ್ರೆಗೆ ಎಂಟು ಒಂಬತ್ತು ದಿನಗಳ ಹಿಂದಿನಿಂದ ಊರಲ್ಲಿ ದೊಡ್ಡ ಸಂಭ್ರಮ. ಈ ಗಜಾನನನ್ನು ಎಷ್ಟು ಆಸಕ್ತಿಯಿಂದ ತಯಾರಿಸುತ್ತಾರೋ ಅದಕ್ಕೆ ಮಿಗಿಲಾದ ವೈಭವದಿಂದ ಉತ್ಸವ ನಡೆಸುತ್ತಾರೆ. ಊರಿನಲ್ಲಿ ರಾಜಬೀದಿ ಎನ್ನದೆ, ಚಿಕ್ಕ ಓಣಿ ಎನ್ನದೆ ಮೂಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಲೆಯಲ್ಲಿರುವ ಕಸಗಳನ್ನೆಲ್ಲಾ ಎತ್ತಿ ಸಗಣಿ ನೀರು ಹಾಕಿ ಶುಭ್ರಮಾಡುತ್ತಾರೆ. ಮನೆಯ ಸೂರಿನ ಹೆಂಚು ಕೈಯಾಡಿಸಿ, ಗೋಡೆಗಳಿಗೆ ಸುಣ್ಣ ಹಚ್ಚಿಸಿ ಕಾರಣೆ ತೆಗೆದು ಗೋಡೆಗಳ ಮೇಲೆ ಚಿತ್ರಗಳನ್ನು ತಯಾರಿಸಿ ಅಂದ ಮಾಡುತ್ತಾರೆ. ಹೆಣ್ಣು ಮಕ್ಕಳು ಹೊಸ ಹೊಸ ರಂಗವಲ್ಲಿಗಳನ್ನು ಕಲಿತು ಅದನ್ನು ತಮ್ಮ ಮನೆಗಳ ಮುಂದೆ ಪ್ರದರ್ಶನಮಾಡಲು ಆತುರರಾಗಿರುತ್ತಾರೆ. ಹೆಂಗಸರು ಮನೆಗಳಲ್ಲಿ ಸಾಮಾನನ್ನು ಸಂಗ್ರಹಿಸಲು ತೊಡಗಿರುತ್ತಾರೆ. ಮತಾಪು ಪಟಾಕಿ ಬಾಣಬಿರುಸು ಇವುಗಳನ್ನು ತಯಾರುಮಾಡುವವರ ಗುಂಪಿಗೆ ಬಿಡುವೇ ಇಲ್ಲ. ಮೊಗ್ಗು ಹೊಲಿಯುವವರು ಕಾಗದದ ಹೂ ತಯಾರುಮಾಡುವವರಿಗಂತೂ ಎಡೆಬಿಡದ ಓಡಾಟ. ಹೋಟೆಲಿನವರಿಗೂ ಅಂಗಡಿ ವರ್ತಕರಿಗೂ ಲಾಭ ಹೊಂದಲು ಇದೇ ತಕ್ಕ ಸಮಯವಾದುದರಿಂದ, ಊರೂರಿನ ಸಂತೆಗಳಿಗೆ ಹೋಗಿ ಸಾಮಾನನ್ನು ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಪ್ರಕೃತಿ ದೇವಿಯೂ ತಾನು ಹೊತ್ತಿರುವ ಹೊಂಬಣ್ಣದ ಕಲೆಗಳನ್ನು ಮುಡುಪಿಗಾಗಿ ತೆಗೆದಿಟ್ಟು ಶುದ್ಧ ಭಕ್ತಿಯಿಂದ ಕೈಜೋಡಿಸಿ ನಿಂತಂತೆ ನಿಂತಿರುವಳು.

ಈ ಭೂತಗಣಗಳ ಅಧಿಪತಿಯನ್ನು ತೇರಿನ ಮೇಲೆ ಏರಿಸುವುದು ಹೇಗೆ ಎಂಬುದು ಎಲ್ಲರ ಸಮಸ್ಯೆ ಇರಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಭೂತಗಣಗಳ ಅಧಿಪತಿಯನ್ನು ತೇರಿನ ಮೇಲೆ ಏರಿಸುವುದು ಹೇಗೆ ಎಂಬುದು ಎಲ್ಲರ ಸಮಸ್ಯೆ ಇರಬಹುದು.

ಗಣೇಶನು ಹಿಡಿಸುವಷ್ಟು ಪೀಠವುಳ್ಳ ಒಂದು ತೇರನ್ನು ತಯಾರು ಮಾಡಿ ಇಟ್ಟಿದ್ದಾರೆ ; ಚಕ್ರಗಳು ಪೂರ್ತಿ ಭೂಮಿಯ ಕೆಳಗೆ ಇಳಿಯುವಂತೆ ಎರಡು ಉದ್ದವಾದ ಸುರಂಗಗಳನ್ನು ತೋಡಿ ಅದರಲ್ಲಿ ತೇರನ್ನು ತಂದು ನಿಲ್ಲಿಸುತ್ತಾರೆ. ತೇರಿನ ಪೀಠವು ಗಣೇಶನ ಪೀಠದ ಮಟ್ಟಕ್ಕೆ ಬರುತ್ತದೆ. ಈ ಪೀಠದ ಮೇಲಿನ ಮಂಟಪವು ಬೇರೆ ತೆಗೆದು ಜೋಡಿಸುವಂತೆ ಮಾಡಿರುತ್ತಾರೆ. ಇದಕ್ಕೆ ಬೇರೆಯಾಗಿಯೇ ಮೊಗ್ಗು ಹೊಲಿಯುತ್ತಿರುತ್ತಾರೆ.

ಗಣಪತಿಯನ್ನು ತೇರಿನ ಮೇಲೆ ಬಿಜಯಮಾಡಿಸುವ ಮುನ್ನ ಮಹಾಮಂಗಳಾರತಿಯಾಗುತ್ತದೆ. ಈ ಮಂಗಳಾರತಿಗೆ ಮೊದಲು ಹಾಕಿದ್ದ ತೆರೆಯನ್ನು ತೆಗೆಯುತ್ತಾರೆ. ಇದಕ್ಕಾಗಿ ಬಹು ದೊಡ್ಡ ಗುಂಪು ಕಾದಿರುತ್ತದೆ.

ಗೌರೀದೇವಿಯನ್ನು ಮನೆಗೆ ಕರತರಬೇಕೆಂದು ತಂದೆಯ ಅಣತಿಯನ್ನು ತಲೆಯಲ್ಲಿ ಧರಿಸಿ ಬಂದ ವಿನಾಯಕನು ಇಂದು ಗೌರಿಯ ಪಾದಸೇವೆಗೆ ಹೊರಡುತ್ತಾನೆ.

"ಗೌರೀ ನಂದನ ನಮೋ ನಮೋ," "ಬೆನಕಣ್ಣ, ಶರಣು ನಿನಗೆ" ಎಂಬ ಧ್ವನಿಯು ಆಕಾಶಕ್ಕೆ ಏರುತ್ತದೆ. ಗಣಪನು ತೇರನ್ನು ಏರುವಾಗ, ತೇರಿನ ಮೇಲೆ ಏರಿದಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಂತೂ ದೊಡ್ಡವರು, ಚಿಕ್ಕವರು, ಹುಡುಗರು ಪಿಳ್ಳೆಗಳು ಹೊಸೆಯುವ ಕೈ ಚಪ್ಪಾಳೆ ಎಲ್ಲರ ಕಿವಿಗಳನ್ನೂ ಬಡಿಯುವಂತೆ ಆಗುವುದು.

ತೇರಿನ ಮೇಲೆ ಮತ್ತೊಂದು ಮಂಗಳಾರತಿ, ಹಣ್ಣು ಕಾಯಿ ನೈವೇದ್ಯ. ಕಾಯಿ ಒಸೆಯುತ್ತಿರುವ ಶಬ್ದವು ಎಲ್ಲ ದಿಕ್ಕಿನಿಂದಲೂ ಪ್ರತಿಧ್ವನಿ ಕೊಡುತ್ತಲಿರುವುದು. ಇಷ್ಟು ಹೊತ್ತಿಗೆ ಪೂರ್ಣಮಿಯ ಚಂದ್ರನ ಪೂರ್ಣರಾಜ್ಯಾಧಿಪತ್ಯವು ನೀಲಿಯು ಆಗಸದಲ್ಲಿ ಎಲ್ಲೆಲ್ಲೂ ಕಂಡು ಬರುತ್ತಲಿರಲು, ಗಣಪತಿಯು ತೇರು ಅಕ್ಕಪಕ್ಕದ ಮತಾಪು ದೀವಟಿಗೆಗಳ ಸಾಲಿನೊಡನೆ ಮುಂದೆ ಹೋಗುತ್ತಲಿರುವ ಬಾಣ ಬಿರುಸುಗಳೊಡನೆ ಮುಂದು ವರಿಯುವುದು. ತೇರು ಎಳೆಯುವುದಕ್ಕೂ ಮಾರಿಗೆ ಒಬ್ಬರಂತೆ ಊರಿನಲ್ಲಿ ಪ್ರತಿಯೊಬ್ಬರೂ ಭಾಗವಹಿಸುತ್ತಾರೆ.

ಈ ವಿಜೃಂಭಣೆಯಲ್ಲಿ ಉತ್ಸವವು ರಾತ್ರಿ ಪ್ರತಿ ಬೀದಿಯಲ್ಲೂ ನಡೆದು ಬೆಳಕು ಹರಿಯುವ ಹೊತ್ತಿಗೆ ಮರಳೂರಿನ ಕೆರೆಯ ಹತ್ತಿರ ಬರುವುದು. ಪದ್ಧತಿಯಂತೆ ಕೆರೆಯ ಹತ್ತಿರ ಪೂಜೆ ಮಂಗಳಾರತಿಗಳಾಗಿ ತೇರಿನಿಂದ ಗಣಪತಿಯನ್ನು ಇಳಿಸುವರು. ಕೆರೆಯ ಸುತ್ತಲೂ ಎಲ್ಲಿ ನೋಡಿದರೂ ಜನಗಳೇ, ಅಕ್ಕಿಯ ಕಾಳು ಹಾಕಲೂ ಎಲ್ಲಿ ಜಾಗವಿಲ್ಲದಂತೆ ಜನರು

Sri Vidyabharati Book Centre, Mysore

CC-O. In Public Domain. Digitized by eGangotri

ಕಿಕ್ಕಿರಿದಿರುವರು. ಗಣಪನು ನೀರಿನಲ್ಲಿ ಇಳಿಯುವುದೇ ತಡ ಎಲ್ಲರೂ ಒಂದು ಹೆಜ್ಜೆ ನೀರಿನಲ್ಲಿಳಿಯುವರು, ಎಲ್ಲರೂ ನೀರನ್ನು ಎರಚುವರು. ಈ ವೈಭವವನ್ನು ನೋಡಲು ಸೂರ್ಯದೇವನು ತ್ವರೆಯಿಂದ ಎದ್ದು ಬಂದು ತನ್ನ ಅರುಣ ಕಿರಣಗಳನ್ನು ನೀರಿಗೆ ಕಳುಹಿಸಲು, ಅವು ಗಣಪನನ್ನು ನೀರಲ್ಲಿ ವಂದಿಸಿ ಮೇಲೆದ್ದು ಬರುವಾಗ ಬಣ್ಣ ಬಣ್ಣದ ರಂಗುಗಳೊಡನೆ ಬರುವುದನ್ನು ಜನರು ಕುತೂಹಲದಿಂದ ತಲೆಯೆತ್ತಿ ಮೂಡಲ ಕಡೆ ನೋಡಿದರೆ "ಬೆಳಕು ಹರಿಯಿತು. ಗಣಪತಿಯು ನೀರಲ್ಲೇ ಇರಲಿ, ನಿಮ್ಮ ನಿಮ್ಮ ಕೆಲಸಗಳಿಗೆ ಹೋಗಿರಿ" ಎಂದು ಹೇಳುವ ಸೂರ್ಯನ ಸಂದೇಶವನ್ನು ಕಳೆದು ಜನರು ತಮ್ಮ ಮನೆಗೆ ಹಿಂದಿರುಗುವರು.

ಆ ಗುಂಪಿನಲ್ಲಿ ಸೇರಿಕೊಂಡಿದ್ದ ನನಗೆ ಆ ಗಣಪತಿಯನ್ನು ಬಿಟ್ಟು ಬರಲು ಕಾಲೇ ಏಳಲಿಲ್ಲ. ಕನ್ನಡನಾಡಿನ ಜನರ ಕಲಾಪ್ರೇಮ ಎಂತಹುದು ? ಅವರು ಒಗ್ಗಟ್ಟಿನಿಂದ ಎಂತಹ ಕಲಾಮೂರ್ತಿಯು ತಮ್ಮದು ಎಂದು ಹೇಳಿಕೊಳ್ಳುವ ಹಕ್ಕನ್ನು ಹೇಗೆ ಸಂಪಾದಿಸಿ ಕೊಂಡರು. ಇಂತಹ ಶಕ್ತಿ ಇರುವವರಿಗೆ ಯಾವ ಕಾರ್ಯವನ್ನು ತಾನೆ ಮಾಡಲು ಅಸಾಧ್ಯ? ಇಂತಹ ಅಮೋಘವಾದ ಶಕ್ತಿಯನ್ನು ಭಗವಂತನು ದಯಪಾಲಿಸಿರುವಾಗ, ಸಂಕುಚಿತವಾದ ದಾನವೃತ್ತಿಯನ್ನು ಹೆಮ್ಮರಿಸಿ, ಅಧೋಗತಿಗೆ

Sri Jayachamarajendra Book Centre, Sringeri

CC-O. In Public Domain. Digitized by eGangotri

ಇಳಿದ ಮಾನವನ ಮನಸ್ಸು, ಒಮ್ಮೆ ತಲೆಯೆತ್ತಿ, ಕನ್ನಡಿಗರ ಕಲಾ ಕೌಶಲವನ್ನು ಮುಂದುವರಿಸಿ, ಅದರ ಮೂಲಕ ಕನ್ನಡಿಗನು ತನ್ನ ಸ್ಥಾನಮಾನವನ್ನು ಉಳಿಸಿಕೊಳ್ಳಲಾರನೇ ಎಂಬ ನೋವು ಹೃದಯವನ್ನು ಕದಡಿ, ಅದರ ಭಾರವನ್ನು ಕಂಬನಿಗಳ ಮೂಲಕ ತಗ್ಗಿಸಿಕೊಂಡಿತು.

ಕನ್ನಡಿಗರೇ, ವಿನಾಯಕನನ್ನು ಮಾತ್ರ ಮರೆಯದೆ ಮುಂದಿನವರು ನೋಡಿಕೊಂಡು ಬನ್ನಿ, ಅವನು ನಿಮಗೆ ಹೇಳುವ ಸಂದೇಶವನ್ನು ಕನ್ನಡಿಗರಿಗೆಲ್ಲ ಹೇಳಿ.

ಸಿದ್ದಗಂಗೆ

ಬೆಳಿಗ್ಗೆ ಬೆಂಗಳೂರಿಂದ ಪೂನಾ ಗಾಡಿ ಹತ್ತಿ ಕುಳಿತರೆ, ಆರು ಸ್ಟೇಷನ್‌ಗಳನ್ನು ದಾಟಿ ಸುಮಾರು ಹತ್ತೂ ಕಾಲು ಗಂಟೆಗೆ ಒಂದು ಚಿಕ್ಕ ಸ್ಟೇಷನ್‌ನಲ್ಲಿ ನಿಲ್ಲುವುದು. ಇಲ್ಲಿ ಗಾಡಿ ನಿಲ್ಲುವುದು ಎರಡೇ ನಿಮಿಷ. ಹೆಚ್ಚಾಗಿ ಇಳಿಯುವವರು ಹೆಂಗಸರೇ. ತಮ್ಮ ಗುಜುಗಜು ಮಾತನ್ನು ನಿಲ್ಲಿಸಿ, ತಮ್ಮ ಗಂಟು, ಮೂಟೆ, ಕುಕ್ಕೆಗಳನ್ನು ಸೊಂಟಕ್ಕೆ ಇರಿಸಿಕೊಂಡು ಗಂಗಮ್ಮನಿಗಾಗಿ ತಂದ ಸೀರೆ ಕುಪ್ಪಸಗಳನ್ನು ನೋಡಿಕೊಂಡು ಇಳಿಯುತ್ತಿರುವ ಸಂಭ್ರಮದಲ್ಲಿ ಗಾಡಿನ ಸಿಳ್ಳು ಕೇಳಿ, ಬೇಗಬೇಗನೆ

CC-O. Vidyabharathi Book Centre, Sirsi

CC-O. In Public Domain. Digitized by eGangotri

ಇಳಿಯಲು ಅವಸರಪಡುತ್ತಾರೆ. ಈ ಮಧ್ಯದಲ್ಲಿ ತಮ್ಮ ಮುದ್ದು ಕಂದಗಳನ್ನು ಮರೆತು ಹೋಗಿರಲು ಗಾಡಿಯಲ್ಲಿ ಕುಳಿತಿರುವ ಹೆಂಗಸರು ರೈಲು ಕದಲಿದಾಗ ಇವರ ಮಕ್ಕಳನ್ನು ಕಿಟಕಿಗಳ ಮೂಲಕ ಜೋಲು ಬಿಡುತ್ತಿರುವುದನ್ನು ಸ್ಟೇಷನ್ ಮಾಸ್ಟರ್ ನೋಡಿ, ತನ್ನ ಕೆಂಪು ಬಾವುಟವನ್ನು ಹಿಡಿದು ರೈಲು ನಿಲ್ಲಿಸಿ, ಮಕ್ಕಳನ್ನು ತೆಗೆದುಕೊಂಡು, ಅವರ ಮಾಲೀಕರ ವಶಕ್ಕೆ ಕೊಟ್ಟು, ಟಿಕೆಟ್ಟನ್ನು ತೆಗೆದುಕೊಂಡು ಹೋಗುವನು. ಮಕ್ಕಳನ್ನು ಪಡೆದು ಅವರಿಗೆ ಕೈಮುಗಿದು, ಛಳಿ ಬಂದು ಬಿಟ್ಟಂತೆ ಚೇತನಗೊಳ್ಳುವರು. ಎರಡು ನಿಮಿಷ ರೈಲು ನಿಲ್ಲುವ ಆ ಸ್ಥಳದಲ್ಲಿ ಏನು ಅತಿಶಯ, ಪ್ರಾಶಸ್ತ್ಯ ಎಂದು ನೀವು ಕೇಳಬಹುದು.

ಸ್ಟೇಷನ್‌ಮಾಸ್ಟರ ಕೈಯಲ್ಲಿ ಟಿಕೆಟ್ ಕೊಟ್ಟ ಮೇಲೆ ಸ್ಟೇಷನ್ನಿಗೆ ಎದುರಾಗಿ ಬೆಟ್ಟದ ಮೇಲೆ ಒಂದು ಚಿಕ್ಕ ಕಾವಿ ಬಾವುಟ ಕಾಣಿಸುವ ದಾರಿಯನ್ನೇ ನೇರ ಹಿಡಿದು ಮುಂದೆ ಹೋದರೆ ಸಣ್ಣ ಕಾಲುದಾರಿ ಸಿಕ್ಕುತ್ತದೆ. ಇನ್ನು ಸ್ವಲ್ಪ ಮುಂದೆ ಹೋದರೆ ಒಂದು ಸಣ್ಣ ಕಾಲುದಾರಿ ಸಿಕ್ಕುತ್ತದೆ. ಇನ್ನೂ ಸ್ವಲ್ಪ ಮುಂದೆ ಹೋದರೆ ಒಂದು ಸಣ್ಣ ಕಾಲುದಾರಿ ಸಿಕ್ಕುವುದು. ಇನ್ನು ಸ್ವಲ್ಪ ಮುಂದೆ ಹೋದರೆ ಒಂದು ರಸ್ತೆ ಸಿಕ್ಕುತ್ತದೆ. ರಸ್ತೆಯ ಎರಡು ಪಕ್ಕಗಳಲ್ಲೂ ನಿಂಬೆಯ ಹೊಂಗೆಯ ಮರಗಳು

CC-O. Vidyabharathi Book Centre, Shingeri

CC-O. In Public Domain. Digitized by eGangotri

ಪುಟ್ಟರೆಂಬೆಗಳಿಂದ ಕರೆದು ಸುಡುಬಿಸಿಲ ಆಯಾಸವನ್ನು ಕಳೆದು ನಿಮ್ಮನ್ನು ಹತ್ತಿರವಿರುವ ಕಲ್ಯಾಣಿಯ ಕಡೆಗೆ ತೋರಿಸುವುವು. ಇಲ್ಲಿ ಕೈಕಾಲು ತೊಳೆದು ಮುಂದೆ ಹೋದರೆ ರಸ್ತೆಗಳ ಎರಡು ಕಡೆಗಳಲ್ಲೂ ಬಂಡೆಗಳಿರುವ ದಾರಿ ಸಿಕ್ಕುವುದು. ಕಣ್ಣಿನ ನೋಟ ಹೋಗುವಷ್ಟೂ ಬಂಡೆಗಳು ಕಾಣುವುದು. ಅಲ್ಲಲ್ಲಿ ತಿಳಿನೀರಿನ ಕೊಳಗಳು. ಬೆಟ್ಟದ ಬಂಡೆಯ ಭಾಗ್ಯವನ್ನು ಬಯಸುವ ಕಣ್ಣು ಇಲ್ಲಿ ತೃಪ್ತಿಯನ್ನು ಪಡೆಯಬಹುದು. ಇಲ್ಲಿಂದ ಕೆಲವು ಮಾರು ದೂರ ಹೋದರೆ ಒಂದು ಮಠ ಕಾಣಿಸುತ್ತದೆ. ಸಾಮಾನು ಗಂಟು ಮೂಟೆಗಳನ್ನು ಕಾಯುವುದಕ್ಕೂ ಊಟ ಉಪಚಾರಕ್ಕೂ ಇಲ್ಲಿ ಏರ್ಪಾಡು ಇದೆ. ನೀವು ಗಳು ಯಾರೇ ಆಗಲಿ, ನಿಮಗೆ ಅಲ್ಲಿನ ಜನರು ಹೊಸಬರು ಎನ್ನಿಸುವುದಿಲ್ಲ. ಪ್ರಕೃತಿಯ ಸೌಂದರ್ಯದ ಮಧ್ಯೆ ಇರುವ ಗುರುಗಳ ಮಠ ದೇವಮಂದಿರ, ಶಾಲೆ, ವಾಚನಾಲಯ, ಸಣ್ಣ ಸಣ್ಣ ಅಂಗಡಿಗಳು, ಚಿಕ್ಕ ಚಿಕ್ಕ ಗೃಹಕೈಗಾರಿಕೆಯ ನಿವೇಶನಗಳು ಗಿರಿ, ಕಂದರಗಳು, ಪೊದೆಗಳು, ಇವುಗಳು ಏಕಕಾಲದಲ್ಲಿ ಕಣ್ಣಿಗೆ ಗೋಚರವಾಗುವುವು.

ಈ ಪ್ರದೇಶದಿಂದ ಸುಮಾರು ೧೫೦ ಮೆಟ್ಟಲು ಏರಿ ಹೋದರೆ ಒಂದು ಬೆಟ್ಟದ ಬಂಡೆಯ ಕೋಟೆಯ ಮಧ್ಯೆ ಸಿದ್ದೇಶ್ವರನ ಮಂದಿರ ಸಿಕ್ಕುವುದು. ಅದರ ಪಕ್ಕದಲ್ಲಿ ಬರಡಿಯ ಬಳಿಗಡೆ ಒಂದು ಬಾವಿ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದೇ ಸಿದ್ದಗಂಗೆ. ಇಲ್ಲಿ ನೀರು ಬತ್ತುವುದೇ ಇಲ್ಲವಂತೆ. ಈ ಸುತ್ತಮುತ್ತಲಿನ ನಾಡಿನ ಹೆಂಗಸರ ಮನದೇವತೆ ಈ ಸಿದ್ದಗಂಗೆ. ನೆನೆಸಿದ ವರವನ್ನು ಕೊಡುವುದರಲ್ಲಿ ಅವಳ ಕೈ ಎತ್ತಿದ ಕೈಯಂತೆ. ಗಂಗಮ್ಮನಿಗೆ ಹರಸಿಕೊಳ್ಳದ ಹೆಂಗಸರಿಲ್ಲ ಈ ನಾಡಿನಲ್ಲಿ.

ಇಲ್ಲಿಂದ ಸ್ವಲ್ಪ ದೂರ ಮುಂದೆ ಹೋದರೆ ದೊಡ್ಡ ಗವಿ ಸಿಕ್ಕುತ್ತದೆ. ಇಲ್ಲಿ ಋಷಿಗಳು ತಪಸ್ಸು ಮಾಡುತ್ತಿದ್ದರಂತೆ. ಹಿರಿಯರು ಒಂದು ಉದಾತ್ತವಾದ ಧ್ಯೇಯವನ್ನಿಟ್ಟುಕೊಂಡು ಜನಗಳ ಮೇಲ್ಮೆಗಾಗಿ ದುಡಿದರು ಎಂಬುದು ಅಲ್ಲಿನ ವಾತಾವರಣವು ಕೂಗಿ ಹೇಳುವಂತೆ ಭಾಸವಾಗುತ್ತದೆ.

ಇಲ್ಲಿನ ಬೆಟ್ಟದ ಬಂಡೆಗಳು ಗಗನವನ್ನು ನೋಡುವೆವೆಂಬ ಹೆಮ್ಮೆಯಿಂದ ಆಕಾಶದ ಕಡೆ ನೋಡುತ್ತ ಬೆಳೆಯುತ್ತಿವೆ. ಮಾನವನ ಹೃದಯದ ಕೆಚ್ಚು ಹೀಗಿದ್ದರಲ್ಲವೇ ಹಿಡಿದ ಕೆಲಸವನ್ನು ಸಾಧಿಸುವುದು ಎಂದು ಕಲ್ಲಿನ ಪೆಡಸು ಸಾರುತ್ತದೆ. ಪ್ರಕೃತಿಸೌಂದರ್ಯವು 'ನನ್ನ ಸೌಂದರ್ಯವನ್ನು ನೋಡಿಯೇ ಭಗವಂತನು ಇಲ್ಲಿ ನೆಲಸಿದನು' ಎಂದು ಸೂಚಿಸುತ್ತದೆ. ನಿನ್ನನ್ನು ನೀನು ಅರಿತುಕೋ; ಹೊರಗಿನ ಆಡಂಬರಕ್ಕೆ ಮನಸೋಲಬೇಡ, ನಿನ್ನ ಕೈಲಾದಷ್ಟನ್ನು ನಿನ್ನ ಜನರ ಏಳಿಗೆಗಾಗಿ ಮಾಡು, ಎಂದು ಇಲ್ಲಿರುವ ಮುನಿಗಳು ಸೂಚಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ರೀತಿಯ ಶಾಂತವಾದ ಆವರಣದಲ್ಲಿ ಕೆಲವು ಗಂಟೆಗಳ ಕಾಲವಿದ್ದರೂ ಮನಸ್ಸಿಗೆ ಒಂದು ವಿಧವಾದ ತೃಪ್ತಿ ಸಂತೋಷಗಳು ಉಂಟಾಗುತ್ತವೆ ; ಮತ್ತೊಮ್ಮೆ ಇಲ್ಲಿಗೆ ಬರಬೇಕೆನ್ನಿಸುತ್ತದೆ. ಶಿವರಾತ್ರಿ ಕಾಲದಲ್ಲಿ ಮತ್ತೊಮ್ಮೆ ಇಲ್ಲಿಗೆ ಬನ್ನಿ. ಈ ಪುಟ್ಟ ಕಾವಿ ಬಾವುಟದ ಮಹತ್ವವನ್ನು ಕಾಣುವಿರಂತೆ.

ಶಿವರಾತ್ರಿಗೆ ಹತ್ತು ಹನ್ನೆರಡು ದಿನಗಳಿಗೆ ಮುಂಚೆ ನಿಂದಲೂ ಈ ಜನರಹಿತವಾದ ಪ್ರದೇಶದಲ್ಲಿ ಎಲ್ಲಿ ನೋಡಿದರೂ ಜನಗಳೇ. ಬೆಟ್ಟದ ಬಂಡೆಯಿಂದ ರೈಲ್ವೆ ನಿಲ್ದಾಣದವರೆಗೆ ಹೆಂಗಸರು ಗಂಡಸರು ಇರುವೆ ಸಾಲಿಟ್ಟಂತೆ ಹೋಗಿ ಬರುತ್ತಲಿರುವರು. ಸಿದ್ದಗಂಗೆಯ ವಿಶಾಲವಾದ ಪ್ರದೇಶದಲ್ಲಿ ಎತ್ತ ನೋಡಿದರೂ ತಡಿಕೆ ಮನೆಗಳು. ಅಂಗಡಿಗಳು, ಮಳಿಗೆಗಳು, ಹೋಟಲುಗಳು, ಸಿನಿಮಾ ಮಂದಿರಗಳು, ರಸ್ತೆಗಳು, ಹೋಮಕುಂಡ, ಪಾಕಶಾಲೆ ಇವುಗಳ ತಯಾರಿಕೆಯಲ್ಲಿ ಜನಗಳು ಮಗ್ನರಾಗಿರುತ್ತಾರೆ. ಗಳುಗಳ ರಾಶಿ, ಹುರಿಗಳ ರಾಶಿ, ಬಿದಿರು ತಡಿಕೆ ಹೆಣೆಯುವವರ ಗುಂಪು, ಸೌದೆಗಳ ರಾಶಿ ಇವುಗಳು ಎಲ್ಲೆಲ್ಲಿಯೂ ಕಣ್ಣಿಗೆ ಬೀಳುತ್ತವೆ.

ಶಿವರಾತ್ರಿಯ ದಿನ ಪರಶಿವನ ಜಡೆಯಲ್ಲಿ ನೆಲೆಸಿರುವ ಗಂಗೆ ಈ ಸಿದ್ದಗಂಗೆಯೊಡನೆ ಸಲ್ಲಾಪ ಮಾಡಲು ಬರುವಳಂತೆ. ಈ ಗಂಗೆಯು ನೀರಿನ ಸಿದ್ದೇಶ್ವರನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಭಿಷೇಕ. ಈ ನೀರಿನ ಕಣಗಳನ್ನು ತಲೆಯಲ್ಲಿ ಧರಿಸಲು ಸಾವಿರಾರು ಮಂದಿ ಬರುವರು. ಈ ಬೆಟ್ಟದ ಬಂಡೆಯ ವಿಶಾಲವಾದ ಪ್ರದೇಶದಲ್ಲಿ ಒಂದು ಪಟ್ಟಣವೇ ನಿರ್ಮಿತ ವಾಗುವುದು.

ಮಠದ ಹತ್ತಿರವಿರುವ ದೇವಮಂದಿರದ ಮುಂದೆ ವಿಶಾಲವಾದ ಬಯಲಿದೆ. ಗರುಡಗಂಬದ ಮುಂದೆ ಸುಮಾರು ೬೦ ಅಡಿ ಎತ್ತರವಿರುವ ಎರಡು ನಂದೀ ಕೋಲು ಕುಣಿಯುತ್ತಿರುವುವು. ಸುಮಾರು ಒಂದು ಸಾವಿರಕ್ಕೆ ಕಡಮೆ ಇಲ್ಲದೆ ಜನ ಇಲ್ಲಿ ನಿಂತಿರುತ್ತಾರೆ. ನಂದಿಕೋಲು ಕುಣಿಸುವವರು ಅಸಮಬಲರೇ ಆಗಿರ ಬೇಕು. ಜನರ ದೃಷ್ಟಿಯೆಲ್ಲ ನಂದಿಕೋಲು ಕುಣಿಸುವವನ ಮೇಲೆ ಇರುತ್ತದೆ.

ಇಲ್ಲಿಗೆ ಸುಮಾರು ದೂರದಲ್ಲಿ ಕಲ್ಲು ಗಾಲಿಯ ಭವ್ಯವಾದ ರಥ ಅಂದವಾಗಿ ಶೃಂಗರಿಸಲ್ಪಟ್ಟು ದೇವ ದೇವನು ನನ್ನ ಮೇಲೆ ಬಿಜಯ ಮಾಡಲು ನನ್ನ ಪೂರ್ವಾ ರ್ಜಿತ ಪುಣ್ಯವೇ ಆಗಿರಬೇಕು ಎಂದು ಹೇಳುವಂತೆ ಗಂಭೀರವಾಗಿ ನಿಂತಿದೆ.

ಅಪರಾಹ್ನದ ಹೊತ್ತು ಸಮೀಪಿಸುತ್ತ ಬಂದ ಹಾಗೆಲ್ಲ ಜನಗಳ ಸಂದಣಿಯು ಹೆಚ್ಚುತ್ತ ಬರುವುದು. ಮುಂದೆ ಏನು ಎನ್ನುವ ಕುತೂಹಲವು ಅದಕ್ಕಿಂತ ಮಿಗಿಲು. ಲೋಕ ಕಲ್ಯಾಣಕ್ಕಾಗಿ ಭೂಭಾರವನ್ನು ತಗ್ಗಿ ಸುವ ದೇವ, ಶೃಂಗಾವತಾರಿ, ಚರ್ಮಾಂಬರಧಾರಿ ಸರ್ಪ

CC-O. Jagadguru Sri Shivarathri Deshikendra Book Centre, Sirigere

CC-O. In Public Domain. Digitized by eGangotri

ಭೂಷಣ ನಿರ್ವಿಕಾರ ಗುಣಾತೀತನಾದುದರಿಂದ ಲಿಂಗ ರೂಪವೇ ಸಾಕೆಂದು ನೆನೆವ ಬಕುತರ ಅಂಗೈಯ ಲಿಂಗ ನಾದ ಸಿದ್ದೀಶ್ವರನು, ಇಂದು ಜನಗಳ ಮನಸ್ಸಿಗೆ ಆನಂದ ವನ್ನು ಬೀರಲು ಶಂಕರನಾಗಿ, ಸರ್ವಾಲಂಕಾರನಾಗಿ, ತೇರಿನಲ್ಲಿ ಬಿಜಯಿಸುವುದನ್ನು ನೋಡಲು ಜನಗಳ ಗುಂಪು ಅಲೆಗಳ ತೆರದಲ್ಲಿ ಬರುವುದು. ಜನಗಳ ಕೋಲಾಹಲ ನಾನಾ ತೆರನಾಗಿ ಇರುತ್ತದೆ—ನಂದಿ ಕೋಲು ಕುಣಿಸುವವರ ಗುಂಪಿನಲ್ಲಿ ಹಾಡು, ತಮಟೆ ಬಡಿಯುವವರ ಗುಂಪಿನಲ್ಲಿ ಚಪ್ಪಾಳೆ, ವಾದ್ಯಗಾರರಲ್ಲಿ ಹುರುಪು. ಭಜನೆಯ ಗುಂಪಿನಲ್ಲಿ ಭಕ್ತಿರಸದ ಹಾಡು ಗಳು. ಒಂದು ಕಡೆ ಹಣ್ಣು ಜವನ ಕೂಗುವವರ ಗುಂಪು, ಶಿವ ಪಂಚಾಕ್ಷರಿ ಜಪಿಸುವವರ ಗುಂಪು, ನೂಕು ನುಗ್ಗ ಲಲ್ಲಿ ಮಕ್ಕಳು ತಪ್ಪಿಸಿಕೊಂಡು ಹೋದರೆಂದು ಕೂಗು ತ್ತಿರುವ ಹೆಂಗಸರ ಗುಂಪು. ಈ ಕೂಗುಗಳೇ ಎಲ್ಲರೆ ಕಿವಿಯ ತಮಟೆಯನ್ನೂ ಒಡೆಯುತ್ತಿರುವಾಗ ಒಂದು ದೊಡ್ಡ ಗಂಟೆಯು ಎಲ್ಲರ ಗಮನವನ್ನೂ ಸೆಳೆಯುವುದು. ಈ ಪ್ರದೇಶಕ್ಕೆ ಅಧಿಪತಿಯಾದವರು ಒಂದು ಮೂರು ಮೊಳ ಲುಂಗಿಯನ್ನು ಸುತ್ತಿ, ವಿಭೂತಿ ರುದ್ರಾಕ್ಷಿ ಮಾಲೆಗಳಿಂದ ಅಲಂಕೃತರಾಗಿ, ಕೈಯಲ್ಲಿ ದಂಡವನ್ನು ಹಿಡಿದು, ಮುಖ್ಯರಾದ ಶಿಷ್ಯರೊಡನೆ ಕಲ್ಯಾಣಮಂಟಪದ ಬಳಿ ಬಂದು ನಿಲ್ಲಲು, ಮಹಾಮಂಗಳಾರತಿಯಾಗುತ್ತದೆ. ಸಕಲವಾದ್ಯಗಳೂ ಒಟ್ಟಿಗೆ ಮೊಳಗುತ್ತವೆ. ಪರಶಿವನು

CC-O. Jangamwadi Math Collection. Digitized by eGangotri

CC-O. In Public Domain. Digitized by eGangotri

ಬೆಳ್ಳಿಯ ಬೆಟ್ಟವನ್ನು ಏರಿದಂತೆ, ತೇರಿನ ಕಡೆಗೆ ದೇವರನ್ನು ಬಿಜಯಮಾಡಿಸುತ್ತಾರೆ. ತೇರಿನ ಮೇಲೆ ದೇವರನ್ನು ಬಿಜಯ ಮಾಡಿಸಿದ ಮೇಲೆ ಪುನಃ ಮಂಗಳಾರತಿಯಾಗುತ್ತದೆ. ಹಣ್ಣು, ಹೂವು, ಜವನ, ಅರಳು, ಮಂತ್ರಾಕ್ಷತೆಗಳು, ಏಕಕಾಲದಲ್ಲಿ ದೇವರ ಕಡೆ ಒಂದೇ ಸಮನೆ ಪಟಪಟನೆ ಆಲಿಕಲ್ಲುಗಳು ಉದುರಿದಂತೆ ಉದುರುತ್ತವೆ. ಅಲ್ಲಿ ನೆರೆದ ಜನರಲ್ಲಿ ನಾನು ತಾನೆಂದು ತೇರಿನ ಕಬ್ಬಿಣದ ಸರಪಣಿಯನ್ನು ಹಿಡಿದು ಸಾರುತ್ತಾರೆ. ತೇರು ಕದಲುವುದೇ ತಡ "ಶಂಭೋ ಶಂಕರ ಮಹದೇವ ಸಿದ್ದೇಶ್ವರ!" ಎಂಬ ಕೂಗು ನಡುನೆತ್ತಿಯ ಮೇಲಿನ ಸೂರ್ಯನನ್ನೂ ಭೇದಿಸುತ್ತದೆ. ಜಾಗಟೆ, ಗಂಟೆ, ತಾಳ, ಡೋಲು, ಶಂಖ, ಕೊಂಬು, ಭೇರಿ, ನಗಾರಿ, ಗುಂಪಿನ ಜೈಕಾರ ಇವು ಏಕಕಾಲದಲ್ಲಿ ಕೇಳಿಬರುವುವು. ತೇರು ಗರುಡಗಂಬವನ್ನು ಸುತ್ತಿ ಸ್ವಲ್ಪ ದೂರದಲ್ಲಿರುವ ವಿಶಾಲವಾದ ಬಯಲಿನಲ್ಲಿ ನಿಲ್ಲುವುದು.

ತೇರು ನಿಂತ ಮೇಲೆ ಗಂಡಸರ ಗುಂಪು ತೀರ್ಥ ಪ್ರಸಾದಕ್ಕಾಗಿ ಚಲಿಸುವುದು. ತೀರ್ಥಪ್ರಸಾದ ಹಂಚುವುದರಲ್ಲೂ ಒಂದು ವ್ಯವಸ್ಥೆ ಇದೆ. ದೇವರ ಅಭಿಷೇಕದ ತೀರ್ಥವನ್ನು ದೊಡ್ಡ ದೊಡ್ಡ ಕಡಾಯಿಗಳಲ್ಲಿ ತುಂಬಿ, ಸುಮಾರು ಇಪ್ಪತ್ತು ಗದ್ದಿಗೆಗಳ ಮೇಲೆ ತೀರ್ಥ ಹಂಚುವವರು ಕುಳಿತಿರುತ್ತಾರೆ. ತೀರ್ಥ ತೆಗೆದುಕೊಳ್ಳುವವರು ತಮಗೆ ತೋರಿದ ಕಾಣಿಕೆಯನ್ನು ಹುಂಡಿಗೆ ಹಾಕಿ ತೀರ್ಥ

Sri Vidyabharathi Book Centre, Sringeri

CC-O. In Public Domain. Digitized by eGangotri

ತೆಗೆದುಕೊಳ್ಳುತ್ತಾರೆ. ಇಲ್ಲಿಂದ ಮುಂದೆಹೋದರೆ ಸಣ್ಣ ಉಪವನ ದಂತೆ ಕಾಣುವ ಪ್ರದೇಶದಲ್ಲಿ ಎತ್ತರವಾದ ಗದ್ದಿಗೆಗಳ ಮೇಲೆ ಸಾವಿರಾರು ವಿಭೂತಿ ಪೊಟ್ಣಗಳನ್ನು ಒಂದು ಕಡೆಯಲ್ಲೂ, ಹುಂಡಿಯನ್ನು ಒಂದು ಕಡೆಯಲ್ಲೂ, ಇಟ್ಟುಕೊಂಡು ಕುಳಿತಿರುತ್ತಾರೆ. ಪ್ರಸಾದ ಬೇಕಾದವರು ಇಲ್ಲಿಗೆ ಹೋಗಿ ಹುಂಡಿಗೆ ಕಾಸು ಹಾಕಿ ಕೈಮುಗಿದರೆ ಪ್ರಸಾದ ಸಿಕ್ಕುತ್ತದೆ. ಇಲ್ಲಿಂದ ಬಳಸಿ ಬರುವ ದಾರಿಯಲ್ಲೇ ಹೂ ಮಂತ್ರಾಕ್ಷತೆ ಬಿಲ್ವಪತ್ರೆಗಳನ್ನು ರಾಶಿ ರಾಶಿಯಾಗಿ ಹಾಕಿಕೊಂಡು ಕೂತಿರುವವರ ಹತ್ತಿರ ಪ್ರಸಾದ ದೊರೆಯುತ್ತದೆ. ಈ ಪ್ರಸಾದವನ್ನು ಕೊಟ್ಟು, "ಯಾರೂ ಊಟಮಾಡದೆ ಹೋಗಕೂಡದು, ಊಟ ಸಿದ್ಧವಾಗಿದೆ" ಎಂದು ಇವರುಗಳು ಕೂಗಿ, ಕೂಗಿ, ಹೋಗುವವರನ್ನು ಅಡ್ಡಹಾಕಿ ನಿಲ್ಲಿಸುತ್ತಾರೆ.

ಪಾಕಶಾಲೆಯು ಈ ಜನರ ಔತಣಕ್ಕೆ ತಕ್ಕಂತೆಯೇ ವಿಶಾಲವಾದ ತೋಪಿನ ಮಧ್ಯೆ ನಿರ್ಮಿತವಾಗಿದೆ. ಸುಮಾರು ಎರಡು ಫರ್ಲಾಂಗ್ ಚದರ ಪ್ರದೇಶದಲ್ಲಿ ಸುತ್ತಲೂ ತಡಿಕೆ ಗೋಡೆ ಹಾಕಿ ಕಟ್ಟಲ್ಪಟ್ಟಿದೆ. ಒಲೆಗಳನ್ನು ಭೂಮಿಯಲ್ಲೇ ತೋಡಿರುತ್ತಾರೆ. ಪಾಕಗಳನ್ನು ಮಾಡುವ ಕೊಳದಪ್ಪಲೆಗಳ ಎತ್ತರ ಎಣಿಗೆ ನಿಲುಕಬೇಕು. ಕುದಿಯುತ್ತಿರುವ ಪದಾರ್ಥಗಳನ್ನು ಕಲಕಲು ಜಗಲಿ ಗೋಡೆಗಳನ್ನು ಹತ್ತಬೇಕು. ತರಕಾರಿಗಳನ್ನು ಹತ್ತಿರ ವಿರುವ ಕೊಳಗಗಳಲ್ಲಿ ತೊಳೆದು ಬಂಡಿಗಳಲ್ಲಿ ತುಂಬಿ

Vidyabharathi Book Centre, Sringeri

CC-O. In Public Domain. Digitized by eGangotri

ಒಂಟೆತ್ತಿನ ಗಾಡಿಗಳಲ್ಲಿ ಎಳಿಸಿ ತಂದ ಗಾಡಿಗಳಿಂದಲೇ ಕೊಳಗಗಳಿಗೆ ತುಂಬುವರೆಂದ ಮೇಲೆ ಅಲ್ಲಿನ ಪಾಕ ಶಾಲೆಯ ಅಂದಾಜನ್ನು ನೀವೇ ಊಹಿಸಿ. ಅಡಿಗೆಗೆ ಬೇಕಾದ ತರಕಾರಿಗಳು ಎತ್ತ ಕಡೆ ನೋಡಿದರೂ ರಾಶಿ ರಾಶಿಯಾಗಿ ಬದ್ದಿರುವುವು. ಸುಮಾರು ಇಪ್ಪತ್ತೈದು ಜನ ಮುದ್ದೆ ಹಿಟ್ಟನ್ನು ದೊಡ್ಡ ದೊಡ್ಡ ಕೊಪ್ಪರಿಗೆಗಳಲ್ಲಿ ಮಾಡಿ, ಚಪ್ಪಡಿ ಕಲ್ಲುಗಳ ಮೇಲೆ ಮುದ್ದೆ ಕಟ್ಟಿ ಒಂದು ಇಟ್ಟಿಗೆ ಗೂಡಿನ ಪ್ರಮಾಣದಲ್ಲಿ ಪೇರಿಸುವರು. ಅನ್ನದ ರಾಶಿ ಒಂದು ದೊಡ್ಡ ಬೆಟ್ಟದ ಪ್ರಮಾಣದಲ್ಲಿ ಬಿದ್ದಿರುವುದು. ಈ ಪ್ರಮಾಣದಲ್ಲಿ ಅಡಿಗೆಯು ತಯಾರಾಗುತ್ತಿದ್ದರೂ ಅಲ್ಲಿ ನೋಡಿ ತಲೆದೂಗಬೇಕಾದ ವಿಚಾರವೇನೆಂದರೆ ಅಲ್ಲಿನ ಶುಭ್ರತೆ. ನಡೆದರೆ ನೆಲಕ್ಕೆ ಗೋಣಿ ಚೀಲಗಳನ್ನು ಹಾಕಿಕೊಂಡು ನಡೆಯುತ್ತಾರೆ. ಬಿಡುವ ಉಸಿರು ತಾಗಬಹುದೆಂದು ಬಾಯಿಗೆ ಬಟ್ಟೆ ಕಟ್ಟಿಕೊಳ್ಳುತ್ತಾರೆ. ಬಡಿಸಲು ಸುಮಾರು ನೂರುಜನ ಅನ್ನದ ಮಕ್ಕರಿಗಳನ್ನೂ, ಹಿಟ್ಟಿನ ಮಕ್ಕರಿಗಳನ್ನೂ, ಕೈಯಲ್ಲಿ ಹಿಡಿದು ನಿಂತಿರುತ್ತಾರೆ. ಒಂದು ಅಗಳನ್ನೂ ಕೆಳಗೆ ಚೆಲ್ಲಕೂಡದೆಂಬ ಕಟ್ಟಾಜ್ಞೆ, ಯಾವ ವಿಧವಾದ ಹೇಸಿಕೆಯನ್ನೂ ಮಾಡಕೂಡದೆಂಬ ನಿಯಮವನ್ನು ಪಾಲಿಸಬೇಕು ಎಂದು ಭಟರು ಜಂಗಮರು ಕೂಗುತ್ತಾರೆ. ಅಲ್ಲಿಗೆ ಬರುವವರೂ ಆ ನಿಯಮವನ್ನು ಪಾಲಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲರ ಕೈಯಲ್ಲೂ ಎಲೆ ಸಿದ್ಧವಾಗಿ ಇರುತ್ತದೆ. ಸ್ವಾಮಿಗಳು ಬಂದು ಈ ಹೆಡೆಗೆಗಳಿಗೆ ತೀರ್ಥವನ್ನು ಹಾಕಿ ದೊಡನೆಯೇ ಬಡಿಸಲು ಆರಂಭ. ಬಡಿಸಿದರೆ ಅನಂತರ ಸ್ವಾಮಿಗಳು ಬಂದು ಒಂದು ಸುತ್ತು ನೋಡಿ, ಯಾರ ಕೈಯಲ್ಲಿಎಲೆ ಇದೆ ಎಂದು ನೋಡುತ್ತಾರೆ, ಈ ಸಾವಿರಾರು ಜನರು ಹೆಂಗಸರು ಗಂಡಸರು ಮಕ್ಕಳು ಏಕಕಾಲದಲ್ಲಿ ಊಟ ಮಾಡಬೇಕಾದರೆ ಅದಕ್ಕೆ ತಕ್ಕ ಏರ್ಪಾಡು ಎಷ್ಟು ಇರಬೇಕು, ಎಂದು ನೀವೇ ಊಹಿಸಿ ನೋಡಿ. ನೀವು ಹೇಳಬಹುದು. ಇದಾವ ಭಕ್ಷ್ಯಭೋಜ್ಯದ ಅಡಿಗೆ ? ಎಂದು. ಆದರೆ ಇಲ್ಲಿ ಬರುವ ಜನರೆಲ್ಲ ಹೆಚ್ಚಾಗಿ ಒಕ್ಕಲು ಮಕ್ಕಳು. ಒಳ್ಳೆಯ ಹುಳಿ, ಹಿಟ್ಟು, ಅನ್ನ ಅವರನ್ನು ತಣಿಸುವಷ್ಟು ಭಕ್ಷ್ಯ ಭೋಜಗಳು ಅವರನ್ನು ತಣಿಸ ಲಾರವು. ಅದೇ ಅವರಿಗೆ ದೇವರ ಪ್ರಸಾದ.

ಊಟಮಾಡಿದ ಮೇಲೆ ಎಲೆಗಳನ್ನು ಮನಸ್ಸು ಬಂದಂತೆ ಹಾಕಲು ಅವರಿಗೆ ಹಕ್ಕಿಲ್ಲ. ಅವನ್ನು ದೂರ ವಿರುವ ಗುಂಡಿಗೆ ತೆಗೆದುಕೊಂಡು ಹೋಗಿ ಹಾಕಬೇಕು. ಕೈ ತೊಳೆಯುವ ಕೊಳದಲ್ಲೇ ಕೈ ತೊಳೆಯಬೇಕು, ಕುಡಿ ಯುವ ನೀರಿರುವ ಕೊಳಕ್ಕೇ ನೀರು ಕುಡಿಯಲು ಹೋಗಬೇಕು.

ಕೊಳಗಳ ಹತ್ತಿರ ಕಾವಲುಗಾರರು ಹೆಚ್ಚಾಗಿರು ವರು. ಮಕ್ಕಳನ್ನು ಅಲ್ಲಿಗೆ ಕಳಿಸುವುದಿಲ್ಲ, ಹೇಸಿಗೆ

CC-O. Jangamwadi Math Collection. Digitized by eGangotri

CC-O. In Public Domain. Digitized by eGangotri

ಮಾಡಗೊಡಿಸುವುದಿಲ್ಲ. ಜಲ ಮಲ ವಿಸರ್ಜನೆಗಳಿಗೆ ಗೊತ್ತಾಗಿರುವ ಕಡೆಗೆ ಹೋಗಬೇಕು.

ಇನ್ನು ಹೆಂಗಸರು ಮಕ್ಕಳು ಇವರ ಕಡೆ ನೋಡೋಣ. ಅವರ ವಿಷಯದಲ್ಲಿ ಹೆಚ್ಚಾದ ಗಮನ ವನ್ನೇ ಇಟ್ಟಿದ್ದಾರೆ. ಮಕ್ಕಳು ತಪ್ಪಿಸಿಕೊಂಡರೇ, ಒಡವೆ ಗಳನ್ನು ಕಳೆದುಕೊಂಡರೆ, ಯಾರಾದರೂ ದಾಂಡಿಗರು ತೊಂದರೆ ಮಾಡಿದರೆ, ಇವರಿಗೆಲ್ಲ ಸರಿಯಾದ ಶಿಸ್ತು ಏರ್ಪಟ್ಟಿದೆ. ಜೀವನದಲ್ಲಿ ವಿರಕ್ತಿ ಹೊಂದಿದ ವೃದ್ಧ ಸುಮಂಗಲಿಯರು. ದೇವರಲ್ಲಿ ಭಕ್ತಿಯುಳ್ಳ ಶಿವಶರಣೆ ಯರು. ಈ ಹೆಂಗಸರ ತಂಡವನ್ನು ನೋಡಿಕೊಳ್ಳಲು ಸಹಾಯಕ್ಕೆ ಬರುತ್ತಾರೆ. ಇವರ ಜೊತೆಯಲ್ಲಿ ಸ್ವಾಮಿಗಳು ಸಾಹಾಯಕ್ಕೆ ಬರುತ್ತಾರೆ. "ನೀಡುವ ಕೈ ಬೇಡಲು ಮುಂದೆ ಬಾರದು" ಎಂಬುದನ್ನು ಮನಗಂಡ ಸ್ವಾಮಿಗಳು ತಾವೇ ಎದುರಿಗೆ ನಿಂದು ಬಡಿಸುತ್ತಾರೆ. ಭಕ್ತಿಯು ಹೆಂಗಸರಲ್ಲಿ ಹೆಚ್ಚು. ತನ್ನ ಮನೆತನದ ಗೌರವವನ್ನು ಉಳಿಸಿಕೊಂಡು ಬಾಳಬೇಕೆಂಬುದು ಪ್ರತಿಯೊಬ್ಬ ಹೆಂಗಸಿನ ಧ್ಯೇಯವೆಂಬು ದನ್ನು ಮನಗಂಡು, ಅವರು ಹೆಂಗಸರನ್ನು ಚೆನ್ನಾಗಿ ಹರಸಿಯೇ ಪ್ರಸಾದ ಕೊಡುತ್ತಾರೆ.

ದಾಹಶಾಂತಿಗಾಗಿ ಪಾನಕ, ನೀರುಮಜ್ಜಿಗೆಗಳ ಮಂಟಪಗಳು ಅನೇಕವಿವೆ. ಯಾರು ಬೇಕಾದರೂ ದಾಹಶಾಂತಿಗಾಗಿ ಇಲ್ಲಿಗೆ ಹೋಗಬಹುದು. ಮನರಂಜನೆ ಗಾಗಿ ಹಾಡು, ಶಿವಕಥೆ, ಪುರಾಣ, ಯಕ್ಷಗಾನ ಇವುಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಏರ್ಪಾಡು ಪಕ್ಕದತ್ತೋ ಪಿನಲ್ಲಿದೆ. ಯಾರು ಬೇಕಾದರೂ ಇಲ್ಲಿಗೆ ಹೋಗಬಹುದು.

ಹೆಂಗಸರ ಗುಂಪು ಊಟ ಮುಗಿದ ಬಳಿಕ ಅಂಗಡಿಗಳ ಬಳಿ ಹಾದುಹೋಗುತ್ತದೆ. ಮಿಠಾಯಿ ಅಂಗಡಿಗಳು, ತಿಂಡಿಯ ಅಂಗಡಿಗಳು, ಬತ್ತಾಸಿನ ಅಂಗಡಿ, ಪಾತ್ರೆ ಅಂಗಡಿ ಇವುಗಳಿಗೆ ಬಿಡುವೇ ಇರುವುದಿಲ್ಲ. ಈ ಅಂಗಡಿಯ ಬೀದಿಯನ್ನು ಹಾಯ್ದುಹೋಗಲು ಸುಮಾರು ಮುಕ್ಕಾಲು ಮೈಲಿ ದೂರವನ್ನಾದರೂ ದಾಟಬೇಕು. ಅಲ್ಲಿ ಒಂದು ವಿಶಾಲವಾದ ಬೈಲು, ಸುತ್ತಲೂ ಮರಗಳು, ಇಲ್ಲಿ ದನಗಳ ಪರಿಷೆ ಸೇರುತ್ತದೆ. ವಿವಿಧವಾಗಿ ಅಲಂಕಾರ ಮಾಡಿದ ಅಂದವಾದ, ದನಗಳನ್ನು ಎಷ್ಟು ಬೇಕಾದರೂ ನೋಡಬಹುದು. ಈ ರೈತರ ಭಾಗ್ಯನಿಧಿಗಳನ್ನು ನೋಡಲು ಅಂಸಖ್ಯಾತರಾದ ಜನರು ನೆರೆದಿರುತ್ತಾರೆ. ಮಕ್ಕಳಿಗೆ ಹಸಿವಾದರೆ ಹೋಟಲುಗಳು ಇದರ ಪಕ್ಕದಲ್ಲೇ ಇವೆ. ಇಷ್ಟು ಹೊತ್ತಿಗೆ ಸಾಯಂಕಾಲವಾಗುವುದು. ಜನಗಳ ಗುಂಪು ರಥದ ಬಳಿ ಬಂದು ಸೇರುವುದು.

ಕತ್ತಲು ಸಮೀಪಿಸುತ್ತಲೇ, ರಥವು ನೂರಾರು ಗ್ಯಾಸಿನ ದೀಪಗಳಿಂದ ಸುತ್ತುಗಟ್ಟುವುದು. ಕರ್ಪೂರಾರತಿ, ಮಂಗಳಾರತಿ, ಜನಗಳ ಹರಕೆಯ ತಂಬಿಟ್ಟಾರತಿ, ಎಲ್ಲವೂ ಒಂದಾದ ಮೇಲೆ ಒಂದನ್ನು ಹಿಂಬಾಲಿಸುವುವು.

ಬಾಣ, ಬಿರುಸು, ಮತಾಪುಗಳು ಸುತ್ತಲೂ ಬೆಳಗುವುವು. ತೇರಿನ ಸುತ್ತಲೂ ಸ್ವಲ್ಪ ದೂರದಲ್ಲಿ

Sri Vidyabharathi Book Centre, Singeri

CC-O. In Public Domain. Digitized by eGangotri

ಒಂದು ಹಸುರು ಮಂಟಪವನ್ನು ನಿಲ್ಲಿಸಿರುತ್ತಾರೆ. ಆಕಾಶದಲ್ಲಿ ಪೂರ್ಣ ಕಪ್ಪು ಏರಲು ಇದನ್ನು ಹತ್ತಿಸುತ್ತಾರೆ, ನವರತ್ನ ಮಂಟಪದಲ್ಲಿ ದೇವರು ಬಿಜಯಿಸುವಂತೆ ಕಾಣುತ್ತದೆ. ಈ ನೋಟವನ್ನು ನೋಡಲು ಈಶ್ವರನೇ ಮುಕ್ಕಣ್ಣನಾಗುವನೋ ಎಂದು ತೋರುತ್ತದೆ. ಜನಗಳು ತಮ್ಮ ಆನಂದವನ್ನು ಸೂಚಿಸಲು "ಶಂಭೋ ಮಹಾದೇವ" ಎಂದು ಒಕ್ಕೊರಲಿನಲ್ಲಿ ಕೂಗುವರು. ಕೈಲಾಸವಾಸಿಯಾದ ಪರಶಿವನು ಒಂದು ದಿನವಾದರೂ ತನ್ನ ಬೆಟ್ಟದ ಬಳಿಯಲ್ಲಿ ತನ್ನ ಬಕುತರಿಂದ ಈ ರೀತಿಯಲ್ಲಿ ಕೂಗಿಸಿಕೊಂಡನೋ ಇಲ್ಲವೋ ಎನಿಸುತ್ತದೆ. ಅಲ್ಲಿ ನಿಂತ ಜನರಿಗೆ ನಾವು ಸತ್ತ ಮೇಲೆ ಸ್ವರ್ಗವನ್ನು ಕಾಣುವೆವೊ ಇಲ್ಲವೊ ಇಂದು ಸ್ವರ್ಗವನ್ನು ಕಂಡೆವು ಎನ್ನುತ್ತಾರೆ. ಇದು ಮುಗಿದ ಮೇಲೆ ಮಂಗಳಾರತಿ, ಬಳಿಕ ಊಟ.

ರಾತ್ರಿ ಜಾಗರಣೆ. ಸಂತತ ಧಾರೆಯಾಗಿ ಸಹಸ್ರ ಧಾರೆಯಾಗಿ, ಗಂಗೆಯು ಶಿವನ ತಲೆಯ ಮೇಲೆ ಬೀಳುತ್ತಲಿರುವಳು. ಪರಶಿವನ ಮೂರ್ತಿಯು ಬಿಲ್ವದಳ, ತುಂಬೆ ಹೂ, ಕಣಿಗಲೆ, ಇವುಗಳ ಅರ್ಚನೆಯಿಂದ ಮುಚ್ಚಿ ಹೋಗಿರುವುದು. ಅರ್ಚನೆ ಮಾಡುವವರ ಕೈಗೆ ಬಿಡುವೇ ಇಲ್ಲ. ಇಡೀ ರಾತ್ರಿಯೆಲ್ಲ ಪೂಜೆಯಾಗುತ್ತದೆ.

ಶಿವಪುರಾಣ, ಹರಿಕಥೆ, ಸಂಗೀತ ರಾತ್ರಿಯೆಲ್ಲ ನಡೆಯುತ್ತದೆ. ಸಣ್ಣ ಸಣ್ಣ ಮಕ್ಕಳು ಸಹ ಎದ್ದಿರುತ್ತವೆ. ಮುಂಜಾನೆ ನಾಲ್ಕು ಗಂಟೆಗೆ ಕೊನೆಯ ಅಭಿಷೇಕವಾಗುತ್ತದೆ. ದೊಡ್ಡ ಗಂಟೆ, ಕಿರುಗಂಟೆ, ಜಾಗಟೆ, ಕೊಂಬು,

Sri Vidyabharathi Book Centre, Sringeri

CC-O. In Public Domain. Digitized by eGangotri

ಕಹಳೆ ಮುಂತಾದುವೂ ಕ್ಷೀರಾಭಿಷೇಕವಾಗುವಾಗ ಏಕ ಕಾಲದಲ್ಲಿ ಮೊಳಗುತ್ತವೆ. ಮಹಾಮಂಗಳಾರತಿಯಾ ದೊಡನೆ ತೀರ್ಥಪ್ರಸಾದಗಳನ್ನು ಹಂಚುತ್ತಾರೆ.

ಈ ಹೊತ್ತಿಗೆ ಜನಗಳೂ ಎದ್ದು ಮಡಿಯುಟ್ಟು ಬೆಳಗಿನ ಊಟಕ್ಕೆ ಸಿದ್ಧರಾಗುತ್ತಾರೆ. ಇದು ಮಹಾ ಶಿವರಾತ್ರಿಯ ಮೊದಲನೆಯ ದಿನದ ಉತ್ಸವ. ಹೀಗೆ ಹನ್ನೆರಡು ದಿನಗಳ ಉತ್ಸವ ನಡೆಯುತ್ತದೆ. ಒಂದೊಂದು ದಿನ ದೇವರಿಗೆ ಒಂದೊಂದು ಉತ್ಸವ, ಕೊನೆಯ ದಿನ ತೆಪ್ಪೋತ್ಸವ. ಪ್ರತಿದಿನವೂ ಸಹಸ್ರಾರು ಜನರಿಗೆ ಸಂತರ್ಪಣೆ.

ಬಿಡಿದಿನಗಳಲ್ಲಿ ಬೆಟ್ಟದ ತಪ್ಪಲಿನಲ್ಲಿ ಇರುವ ಒಂದು ಸಣ್ಣ ಕೊಪ್ಪಲು, ಈ ದಿನಗಳಲ್ಲಿ ಒಂದು ದೊಡ್ಡ ಪಟ್ಟಣ ವಾಗಬೇಕಾದರೆ ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಯಾರು ಮಾಡಿರಬೇಕು. ಹೇಗೆ ಮಾಡಿರಬೇಕು ಎಂಬ ಅಂಶವು ಪ್ರತಿಯೊಬ್ಬ ವಿಚಾರಪರನ ಮನಸ್ಸಿಗೂ ಹೊಳೆಯದೇ ಇರದು. ಇಲ್ಲಿನ ಅತಿಶಯವೇನೆಂದರೆ, ಇಲ್ಲಿನ ಯಾವ ಪ್ರದೇಶದಲ್ಲೂ ಎಳ್ಳಷ್ಟೂ ಕಶ್ಮಲವಿಲ್ಲ; ಕಸವನ್ನು ರೀತಿಯಲ್ಲಿ ಉಪಯೋಗಿಸಿ, ನೈರ್ಮಲ್ಯವನ್ನು ಕಾಪಾಡಿ ಕೊಂಡು, ಕಸಕ್ಕೂ ಒಂದು ಉಚಿತ ಬೆಲೆಯನ್ನು ಕೊಟ್ಟು ಉಪಯೋಗಿಸಿಕೊಳ್ಳುವುದೆಂದರೆ ಅದು ಒಂದು ಒಳ್ಳೆಯ ವ್ಯವಸ್ಥೆ ಅಲ್ಲವೇ ?

ಪ್ರತಿದಿನ ಸಾಯಂಕಾಲ, ಒಟ್ಟುಗೂಡಿಸಿದ ಬೇರೆ ಬೇರೆ ಗುಂಪಿನ ಕಸಗಳನ್ನು ಹರಾಜು ಹಾಕುತ್ತಾರೆ. ಇದರ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೆಗಣಿಯ ಗುಡ್ಡೆ ಒಂದು ರಾಶಿಯಾಗಿರುತ್ತದೆ, ಕಾಯಿ ಒಡೆದ ಚಿಪ್ಪು ಗೂಡೆಗಳ ಗಟ್ಟಿ ಬಿದ್ದಿರುತ್ತವೆ. ಬಾಳೆ ಹಣ್ಣಿನ ಸಿಪ್ಪೆ. ಕಬ್ಬಿನ ಸಿಪ್ಪೆ, ಇವುಗಳು ರಾಶಿ ರಾಶಿಯಾಗಿ ದನದ ಪರಸೆಯವರಿಗೆ ಸಿಕ್ಕುತ್ತದೆ. ಇದರ ಹಣವೆಲ್ಲವೂ ಭಂಡಾರಕ್ಕೆ ಸೇರುತ್ತದೆ.

ಈ ದೊಡ್ಡ ಉತ್ಸವಕ್ಕೆ ಖರ್ಚು ಎಲ್ಲಿಂದ ಬರುತ್ತದೆ ಎಂಬುದು ಅಲ್ಲಿಗೆ ಹೋದ ಪ್ರತಿಯೊಬ್ಬ ವಿಚಾರ ಪರನಿಗೂ ತೋರುವುದು. ಆದರೆ ಆ ಮಠದ ಸ್ವಾಮಿಯ ಗಂಭೀರವಾದ ಮುಖವು "ಒಂದು ಹಿಡಿಯಕ್ಕಿ ನನ್ನ ಜೋಳಿಗೆಗೆ ಹಾಕಿದರೆ ಸಾಕು ನನಗೆ ಅದೇ ಅತಿಶಯವಾದ ಧನ" ಎಂಬುದನ್ನು ಸೂಚಿಸುತ್ತದೆ.

ಮಾಘಮಾಸ ಒಂದು ಬಿಟ್ಟು ಉಳಿದ ತಿಂಗಳು ಈ ಮಠದ ಸ್ವಾಮಿಗಳು ತಮ್ಮ ಶಿಷ್ಯರ ಮನೆಗಳಿಗೆ ಪ್ರವಾಸ ಹೊರಡುತ್ತಾರೆ. ತಮ್ಮ ಶಿಷ್ಯರುಗಳಿಗೆ ಧರ್ಮದ ಉಪದೇಶವಿತ್ತು. ಅವರು ಕೊಡುವ ಅಲ್ಪ ಕಾಣಿಕೆಯನ್ನು ಅನಂತವೆಂದು ಭಾವಿಸಿ, ಮಠದಲ್ಲಿರುವ ಕಣಜಗಳನ್ನು ತುಂಬುತ್ತಾರೆ. ಹಳ್ಳಿಯ ಗೌಡನ ಪಾದಕಾಣಿಕೆಗಾಗಿ ಕೊಡುವ ದವಸದ ಮೂಟೆಗಳು, ದುಡಿಯುವ ರೈತನ ಬೊಗಸೆಗೈಯ ಧಾನ್ಯ, ಕಳೆ ಕೀಳುವ ಕೂಲಿಯ ಹಿಡಿಯಕ್ಕಿಯ ಭಿಕ್ಷೆ, ಎಲ್ಲಕ್ಕೂ ಸ್ವಾಮಿಗಳ ಒಂದೇ ವಿಧವಾದ ಆಶೀರ್ವಾದ, ಹಸನ್ಮುಖ, ಇವು ಜನರನ್ನು ಈ ಮಠದ ಕಡೆಗೆ ಆಕರ್ಷಿಸುವುವು.

ಈ ಉತ್ಸವದಲ್ಲಿ ಬಡಜನರಿಗೆ ಹೊಟ್ಟೆಯ ತುಂಬ ಊಟ, ಕಣ್ಣು ತುಂಬ ನೋಟ, ಅವರ ಮನಸ್ಸಿಗೆ ಶಾಂತಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಕೆ. ತಾವು ಕೊಡುವ ಒಂದು ಹಿಡಿ ಭಿಕ್ಷೆಗೆ ಇಲ್ಲಿ ಬಂದು ದೇವನ ಪಾದದಲ್ಲಿ ಅಡ್ಡಬಿದ್ದು ಏಳುವಾಗ ಈ ಜನಗಳ ಹೃದಯವು ಕಲಕಿ, ಕಣ್ಣೀರಿನ ಮೂಲಕ ಅವರ ಭಾವನೆಗಳು ಹರಿದು ಹೋಗುವುವು.

ಸ್ವಾಮಿಯ ಮನೋಭಿಪ್ರಾಯವಾದರೂ ಹಾಗೆಯೇ ಪ್ರತಿಯೊಬ್ಬರೂ ಊಟ ಮಾಡುತ್ತಲಿರುವಾಗ, ಅವರು ಬಂದು ಸುತ್ತ ನೋಡಿದಾಗ, ಏಕಕಾಲದಲ್ಲಿ ಅಷ್ಟು ಜನರು ಆನಂದದಿಂದ ಸವಿಯುವ ನೋಟವನ್ನು ನನಗೆ ನೋಡಲು ಪರಶಿವನು ಕರುಣಿಸಿದನಲ್ಲಾ ಎಂದು ಸಂತೋಷ ಪಡುತ್ತಾರೆ.

ಈ ಮಠವು ತನ್ನ ಪರಿವಾರಕ್ಕಾಗಿ ಒಂದು ಶಾಲೆಯನ್ನು ಸ್ಥಾಪಿಸಿತು. ಆ ಪ್ರಾಥಮಿಕ ಶಾಲೆ ಮಾಧ್ಯಮಿಕವಾಯಿತು. ಮಾಧ್ಯಮಿಕ ಶಾಲೆ ಈಗ ಪ್ರೌಢಶಾಲೆಯಾಗಿದೆ.

ಜೀವನದಲ್ಲಿ ನಮ್ಮ ಹಿರಿಯರು ಸಂನ್ಯಾಸಾಶ್ರಮಕ್ಕೆ ಯಾವ ಸ್ಥಾನವನ್ನು ಕೊಟ್ಟಿದ್ದರು, ಎಂತಹ ಸಂಸ್ಕೃತಿಯನ್ನು ಜನಗಳ ಜೀವನಾಡಿಗಳಲ್ಲಿ ಹರಿಸಿದ್ದರು ಎಂಬುದನ್ನು ಅಶೋಕನ ಕಾರ್ಯಗಳು ನಿರೂಪಿಸುತ್ತವೆ. ಅದೇ ಕೆಲಸವನ್ನು ಅಲ್ಲಿ ಇಲ್ಲಿ ಹಾರಾಡುತ್ತಲಿರುವ ಚಿಕ್ಕ ಕಾವಿ ಬಾವುಟಗಳು ಕೈಗೊಂಡಿವೆ.ಇಂತಹ ಅನೇಕ ಕಾವಿ ಬಾವುಟಗಳು ನಮ್ಮ ದೇಶದಲ್ಲಿನ ನಿರಕ್ಷತೆಯನ್ನು ಹೋಗಲಾಡಿಸುವ ಉದ್ಯಮಗಳನ್ನು ಕೈಕೊಳ್ಳಲಾರವೇ ಎಂಬುದು ಪ್ರತಿಯೊಬ್ಬ ವಿಚಾರ ಪರನಿಗೂ ತೋರಬೇಕಲ್ಲವೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

—:0:—

ನೀವು ಓದಲೇಬೇಕಾದ ಪುಸ್ತಕಗಳು

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಪವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

ಬೆಲೆ : 2–50

Sri Vidyabharathi Book Centre, Sringeri

ಜಯಲಕ್ಷ್ಮಿ ಪ್ರಿಂಟರ್ಸ್, ಮೈಸೂರು–4.